SRI D.B. CHANDRE GOWDA: The basic question is, he is trying to introduce the element of competition in the field of transport, that is the concept of the nationalisation of the transport system.

MR. SPEAKER : Anyway, Transport demands are coming up for discussion. This can be gone at that time.

SRI AZEEZ SAIT : Mr. Sindia knows everything and yet he wants to beat..

SRI PGR SINDIA : I do not want to pull the legs of the Hon. Minister. If possible, I want to pull the legs of this Government.

MR. SPEAKER: The trouble is that there is some kind of love hate relationship between yoursly and the Hon. Minister.

**ಜಿಲ್ಲಾ ಪರಿಷತ್ತುಗಳಿಂದ ನೇಮಕಗೊಂಡ ಗೌರವಾನ್ವಿತ ಶಿಕ್ಷಕರನ್ನು ಮುಂದುವರಿಸುವುದು.**

436 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ(ಚಿಕ್ಕಪೇಟೆ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಇಲ್ಲಿಯವರೆಗೂ ಜಿಲ್ಲಾ ಪರಿಷತ್ತುಗಳ ವತಿಯಿಂದ ನೇಮಕ ಮಾಡಲಾದ ಗೌರವ ಶಿಕ್ಷಕರ ಸಂಖ್ಯೆ ಎಷ್ಟು (ಜಿಲ್ಲಾ ಪರಿಷತ್ತುವಾರು ಅಂಕಿ ಅಂಶಗಳನ್ನು ನೀಡುವುದು)*

*ಆ) ಈ ಗೌರವ ಶಿಕ್ಷಕರುಗಳ ಸೇವೆಯನ್ನು ಮುಂದುವರಿಸಲು ಸರ್ಕಾರ ಯಾವುದಾದರೂ ನಿರ್ಧಾರವನ್ನು ಕೈಗೊಂಡಿದೆಯೇ?*

*ಇ) ಗೌರವ ಶಿಕ್ಷಕರನ್ನು ನೇಮಿಸುವಾಗ ಮೀಸಲಾತಿ ಪದ್ಧತಿಯನ್ನು ಅನುಸರಿಸಿಲಾಗಿದೆಯೇ?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು)

ಅ) ರಾಜ್ಯದಲ್ಲಿ ಜಿಲ್ಲಾ ಪರಿಷತ್ತುಗಳ ವತಿಯಿಂದ ಈ ಕೆಳಕಂಡಂತೆ ಗೌರವ ಶಿಕ್ಷಕರುಗಳು ನೇಮಕಗೊಂಡಿರುತ್ತಾರೆ.

| | | |
|---|---|---|
| 1. | ಬೆಂಗಳೂರು ಗ್ರಾಮಾಂತರ | 1,596 |
| 2. | ಕೋಲಾರ ಜಿಲ್ಲೆ | 1,021 |
| 3. | ಶಿವಮೊಗ್ಗ ಜಿಲ್ಲೆ | 368 |
| 4. | ಬಳ್ಳಾರಿ ಜಿಲ್ಲೆ | 850 |
| | ಒಟ್ಟು | 3,837 |

ಆ) ಈ ಶಿಕ್ಷಕರುಗಳು ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದಲ್ಲಿ ಸೇವೆಯನ್ನು ಕ್ರಮಬದ್ಧಗೊಳಿಸುವ ಬಗ್ಗೆ ದಾವೆಯನ್ನು ಹೂಡಿ ನ್ಯಾಯಾಲಯದಿಂದ ತೀರ್ಪು ಪಡೆದಿರುತ್ತಾರೆ.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಸಾಮಾನ್ಯವಾಗಿ ನೇಮಕಾತಿ ಮಾಡಿಕೊಳ್ಳುವಾಗ ಅವರು ಸಲ್ಲಿಸಿರುವ ಸೇವೆಗೆ ಅನುಗುಣವಾಗಿ ಒತ್ತಾಸೆ ಅಂಕಗಳನ್ನು ಕೊಟ್ಟು ಆಯ್ಕೆಗೆ ಪರಿಗಣಿಸುವ ವಿಚಾರವನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಇ) ಅನುಸರಿಸಿರುವುದಿಲ್ಲ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಮಾನ್ಯ ಸಭಾಧ್ಯಕ್ಷರೇ, ಇಲ್ಲಿಯವರೆವಿಗೂ ಜಿಲ್ಲಾ ಪರಿಷತ್ತುಗಳ ವತಿಯಿಂದ ನೇಮಕ ಮಾಡಲಾದ ಗೌರವಾನ್ವಿತ ಶಿಕ್ಷಕರ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ 3837 ಗೌರವಾನ್ವಿತ ಶಿಕ್ಷಕರನ್ನು ನೇಮಕಾತಿ ಕೊಡಲಾಗಿದೆಯೆಂದು ಹೇಳಿದ್ದಾರೆ. ಎವಡನೆಯದಾಗಿ ಇದುವರೆಗೂ ನೇಮಕಾತಿ ಮಾಡಿಕೊಂಡಿರುವ ಗೌರವಾನ್ವಿತ ಶಿಕ್ಷಕರ ಸೇವೆಯನ್ನು ಮುಂದುವರೆಸಲು ಸರ್ಕಾರ ಯಾವುದಾದರೂ ನಿರ್ಧಾರವನ್ನು ಕೈಗೊಂಡಿದೆಯೇ? ಎಂದು ಕೇಳಿದ್ದಕ್ಕೆ Teachers have filed writ petition in supreme court and sought orders for the regularisation of their jobs ಎಂದು ಉತ್ತರ ಕೊಡುತ್ತಾರೆ.

ಮೂರನೆಯದಾಗಿ, ಗೌರವ ಶಿಕ್ಷಕರನ್ನು ನೇಮಿಸುವಾಗ ಮೀಸಲಾತಿ ಪದ್ಧತಿಯನ್ನು ಅನುಸರಿಸಲಾಗಿದೆಯೇ ಎಂದು ಕೇಳಿದ್ದಕ್ಕೆ, ಅನುಸರಿಸಿರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಇದು ಬಹಳ ದೊಡ್ಡ ಪ್ರಶ್ನೆಯಾಗಿದೆ. ಗೌರವಾನ್ವಿತ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವಾಗ ಯದ್ವಾತದ್ವಾ ನೇಮಕಾತಿ ಮಾಡಿಕೊಂಡಿರುತ್ತಾರೆ. ರೋಸ್ಟರ್ ಸಿಸ್ಟಮ್ ಅನ್ನು ಫಾಲೋ ಮಾಡಿರುವುದಿಲ್ಲ. ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜಾತಿ ವರ್ಗಗಳವರಿಗೆ ಏನೇನು ಮೀಸಲಾತಿ ಇಟ್ಟಿದ್ದರೋ ಆ ಮೀಸಲಾತಿ ಪ್ರಕಾರ ನೇಮಕಾತಿ ಮಾಡಿಕೊಂಡಿರುವುದಿಲ್ಲ. ಎರಡನೆಯದಾಗಿ ಇವರಿಗೆ ಮಿನಿಮಮ್ ವೇಜಸ್‌ಅನ್ನು ಕೊಡುತ್ತಿಲ್ಲ. ಸರ್ಕಾರಿ ನಿಯಮದ ಪ್ರಕಾರ ಅವರಿಗೆ ಸುಮಾರು 2,000 ರೂಪಾಯಿಗಳ ಸಂಬಳ ಕೊಡಬೇಕು. ಆದರೆ, ಗೌರವಾನ್ವಿತ ಶಿಕ್ಷಕರಿಗೆ 150 ರೂಪಾಯಿಗಳಿಂದ 300 ರೂಪಾಯಿಗಳವರೆಗೆ ಸಂಬಳ ಕೊಟ್ಟು ಅವರಿಂದ ಕೆಲಸ ತೆಗೆದುಕೊಳ್ಳುತ್ತಿದ್ದು, ಪರ್ಮನೆಂಟ್ ಮಾಡುತ್ತಿಲ್ಲ. ಅವರ ಸ್ಥಿತಿ ಅಧೋಗತಿಗೆ ಇಳಿದಿದ್ದು, ಏನು ಮಾಡಬೇಕೆಂದು ತೋಚದೆ ಕೋರ್ಟಿಗೆ ಹೋಗಿದ್ದಾರೆ. ಇವರ ಸಮಸ್ಯೆಗಳ ಬಗ್ಗೆ ಸರ್ಕಾರ ದೀರ್ಘವಾಗಿ ಚಿಂತನೆ ಮಾಡಿ ಅಧ್ಯಯನ ಮಾಡಿದೆಯೇ? ಸೇವೆ ಮಾಡುತ್ತಿರುವ ಶಿಕ್ಷಕರ ಮುಂದಿನ ಗತಿ ಏನೆಂಬುದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

11.40 ಎ.ಎಂ

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ಈ ಜಿಲ್ಲಾಪರಿತ್ತಿನವರು ಏನು ಗೌರವ ಶಿಕ್ಷಕರೆಂದು ಹೆಸರನ್ನು ಹೇಳಿ ನೇಮಕ ಮಾಡಿಕೊಂಡಿದ್ದಾರೆ ಅದು ಕಾನೂನು ಬಾಹಿರವಾಗಿರತಕ್ಕ ನೇಮಕಾತಿಗಳು. ನಾವು ಅದಕ್ಕೆ ಅನುಮತಿಯನ್ನು ಕೊಟ್ಟಿಲ್ಲ, ಜಿಲ್ಲಾಪರಿಷತ್ತುಗಳು ಈ ರೀತಿ ನೇಮಕ ಮಾಡಿಕೊಳ್ಳುವ ಮೊದಲೂ ಕೂಡ ನಾವು ಹೇಳಿದ್ದೆವು. ಅನಂತರ ಕೂಡ ಹೇಳಿದ್ದೆವು ಈ ನೇಮಕಾತಿಯನ್ನು ನಿಮ್ಮ ಜವಾಬ್ದಾರಿಯಿಂದ ಮಾಡುತ್ತಿದ್ದೀರಿ, ಈ ರೀತಿ ಮಾಡಬಾರದು ಸರ್ಕಾರ ಇದಕ್ಕೆ ಜವಾಬ್ದಾರಿಯಲ್ಲವೆಂದು ಹೇಳಿದರೂ ಕೂಡ ,ನೇಮಕಾತಿಯ ನಿಯಮಗಳಲ್ಲಿ ಅದಕ್ಕೆ ಅವಕಾಶವಿಲ್ಲದಿದ್ದರೂ ಕೂಡ ಅವರು ನೇಮಕಾತಿಯನ್ನು ಮಾಡಿಕೊಂಡಿದ್ದಾರೆ. ಅವರಿಗೆ ಗೌರವ ವೇತನವೆಂದು ಹೇಳಿ ಒಂದೊಂದು ಜಿಲ್ಲೆಯಲ್ಲಿ, ಒಂದೊಂದು ಜಿಲ್ಲಾಪರಿಷತ್ತಿನಲ್ಲಿ ಅಂದರೆ ಬೆಂಗಳೂರು ಗ್ರಾಮಾಂತರ ಜಿಲ್ಲಾಪರಿಷತ್ತಿನಲ್ಲಿ 300 ರೂ.ನ ಪ್ರಕಾರ, ಕೋಲಾರ ಜಿಲ್ಲಾಪರಿಷತ್ತಿನಲ್ಲಿ 400 ಪ್ರಕಾರ, ಶಿವಮೊಗ್ಗ ಜಿಲ್ಲಾಪರಿಷತ್ತಿನಲ್ಲಿ 300 ಪ್ರಕಾರ, ಬಳ್ಳಾರಿ ಜಿಲ್ಲಾಪರಿಷತ್ತಿನಲ್ಲಿ 250 ಪ್ರಕಾರ ಗೌರವಧನವನ್ನು ಕೊಡುತ್ತಾ ಅವರ ಸೇವೆಯನ್ನು ಪಡೆಯುತ್ತಿದ್ದಾರೆ. ಇದು ಎಲ್ಲಾ ನಿಯಮಗಳನ್ನು ಉಲ್ಲಂಘಿಸಿ ಮಾಡಿರತಕ್ಕ ನೇಮಕಾತಿಯಾಗಿದೆ. ಎರಡನೆಯದಾಗಿ ಇದರಲ್ಲಿ ರೋಸ್ಟರ್ ಪದ್ಧತಿಯನ್ನು ಪಾಲಿಸಲಿಲ್ಲ. ಯಾವ ರೀತಿಯ ಮೀಸಲಾತಿಯ

ನಿಯಮವನ್ನು ಕೂಡ ಪಾಲಿಸದೆ ನೇಮಕಾತಿ ಮಾಡಲಾಗಿದೆ. ಆನಂತರ ಅವರು ಸುಪ್ರೀಮ್ ಕೋರ್ಟಿಗೆ ಹೋದರು. ಸುಪ್ರೀಮ್ ಕೋರ್ಟಿನವರು ಇವರಿಗೆ ಏನಾದರೂ ವೆಯ್‌ಟೇಜ್‌ನ್ನು ಕೊಡಬೇಕೆಂದು ಹೇಳಿದಮೇಲೆ ನಾವು ಮಾನವೀಯತೆಯ ದೃಷ್ಟಿಯಿಂದ ಎರಡು ವಿಚಾರಗಳನ್ನು ಪರಿಗಣಿಸಿ ಸರ್ಕಾರ ನೇಮಕಾತಿಯನ್ನು ಮಾಡತಕ್ಕ ನಿಯಮಗಳನ್ನು ಮಾರ್ಪಾಡುಮಾಡಿದೆ. ಒಂದನೆಯದಾಗಿ ಇವರಿಗೆ ನಮ್ಮ ನೇಮಕಾತಿಯಲ್ಲಿ ಗರಿಷ್ಟ ವಯೋಮಿತಿಯು ಅನ್ವಯವಾಗುವುದಿಲ್ಲ. ಎರಡನೆಯದಾಗಿ ಒಂದು ವರ್ಷ ಸೇವೆಯನ್ನು ಸಲ್ಲಿಸಿದಂಥವರಿಗೆ ಮಾತ್ರ ಅರ್ಧ ಅಂಕಗಳನ್ನು ಕೊಡತಕ್ಕಂಥ ಒಂದು ವೆಯ್‌ಟೇಜನ್ನು ಕೊಟ್ಟು ನಾವು ಈಗಾಗಲೇ ನೇಮಕಾತಿಯ ನಿಮಯಗಳಲ್ಲಿ ನಮೂದಿಸಿದ್ದೇವೆ. ಆದರೆ ಅವರನ್ನು ರೆಗ್ಯುಲರೈಸ್ ಮಾಡುವುದಕ್ಕಾಗುವುದಿಲ್ಲ. ವೆಯ್‌ಟೇಜ್ ಮತ್ತು relaxation of age ಈ ಆಧಾರದ ಮೇಲೆ ಅವರನ್ನು ನೇಮಕ ಮಾಡಿಕೊಳ್ಳಲು ಅವಕಾಶ ಮಾಡಿದ್ದೇವೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಮಂತ್ರಿಗಳು ಕೋಲಾರ, ಶಿವಮೊಗ್ಗ, ಬಳ್ಳಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ 300ರಿಂದ 400ರವರೆಗೆ ಕೊಡುತ್ತಾರೆಂದು ಹೇಳಿದರು. ಅದು ನಿಜ. ಇಲ್ಲಿ ಏನಾಗಿದೆ ಎಂದರೆ ಮಾನ್ಯ ಶಿಕ್ಷಣ ಮಂತ್ರಿಗಳು ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತೇವೆಂದು ಘೋಷಣೆಯನ್ನು ಮಾಡಿದ್ದಾರೆ. ಸಾವಿರಾರು ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಹೊರಟ್ಟಿದ್ದಾರೆ. ಅದರೊಳಗೆ ಈ ರೀತಿ ಜಿಲ್ಲಾಪರಿಷತ್ತಿನವರು ನೇಮಕ ಮಾಡಿರತಕ್ಕ ಶಿಕ್ಷಕರಿಗೇನಾದರೂ ಆಧ್ಯತೆಯನ್ನು ಕೊಟ್ಟು ಅವರನ್ನು ಅಬ್ಸರ್ಬ್ ಮಾಡಿಕೊಳ್ಳುತ್ತೀರಾ? ಇದು ಒಂದು ಪ್ರಶ್ನೆ. ಮತ್ತೊಂದು ಪ್ರಶ್ನೆ ಏನೆಂದರೆ ಒಂದು ಕಾಲಮಿತಿಯನ್ನಿಟ್ಟು, ಆ ಕಾಲಮಿತಿಯೊಳಗೆ ರೆಗ್ಯುಲರೈಸ್ ಮಾಡಲು ಸಾಧ್ಯವಾಗುತ್ತದೆಯೇ?

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ತಮಗೆ ಹೇಳಿರುವ ಪ್ರಕಾರ ನೇಮಕಾತಿಯ ನಿಯಮಗಳನ್ನು ಉಲ್ಲಂಘಿಸಿ, ಮೀಸಲಾತಿಯ ನಿಯಮಗಳನ್ನು ಅನುಸರಿಸದೆ ಮಾಡಿದಂಥ ಈ ಎಲ್ಲಾ ಹುದ್ದೆಗಳನ್ನು ನಾವು ರೆಗ್ಯುಲರೈಸ್ ಮಾಡಲು ಆಗುವುದಿಲ್ಲ. ಹಾಗೆ ಮಾಡಿದರೆ ಅದು ಸಾಮಾಜಿಕ ನೀತಿಗೆ ವಿರುದ್ಧವಾಗುತ್ತದೆ. ಆದುದರಿಂದ ಅಬ್ಸಾರ್ಪ್ಷನ್‌ನ ಪ್ರಶ್ನೆ ಉದ್ಭವವಾಗುವುದಿಲ್ಲ. ಈಗಾಗಲೇ ಮಾಧ್ಯಮಿಕ ಶಿಕ್ಷಕರ ನೇಮಕಾತಿಯ ಬಗ್ಗೆ ಕ್ಯಾಬಿನೇಟ್‌ನಲ್ಲಿ ಅಂತಿಮ ಒಪ್ಪಿಗೆಯನ್ನು ಪಡೆದಿದ್ದೇವೆ. ಬಹುಶಃ ರಾಜ್ಯಪಾಲರ ಅಂಕಿತವು ಇವತ್ತು ನಾಳೆಯೊಳಗೆ ಸಿಗಬಹುದು. ಅದು ಆದಕೂಡಲೆ ಬಹುಶ: 1-2 ತಿಂಗಳೊಳಗೆ ಈ ಮಾಧ್ಯಮಿಕ ಶಿಕ್ಷಕರ ನೇಮಕಾತಿಯ ಪಟ್ಟಿ ಅಂತಿಮವಾಗುತ್ತದೆ. ಆಗ ವೆಯ್‌ಟೇಜ್ ಕೊಟ್ಟಿರುವ ಪ್ರಕಾರ they have to stand to their chance.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೆ, ಕೆಲವು ಜಿಲ್ಲಾಪರಿಷತ್ತಿನಲ್ಲಿ ಗೌರವ ಶಿಕ್ಷಕರನ್ನು ನೇಮಕ ಮಾಡಿಕೊಳ್ಳತಕ್ಕ ಸಂದರ್ಭ ಏಕಾಯಿತೆಂದರೆ ಬಹಳಷ್ಟು ಕಡೆ ಶಿಕ್ಷಕರ ಹುದ್ದೆ ಖಾಲಿ ಇತ್ತು. ಕೆಲವು ಕಡೆ ೪೦-೫೦ ಮಕ್ಕಳಿರತಕ್ಕ ಪ್ರಾಥಮಿಕ ಶಾಲೆಗಳಲ್ಲಿ ಒಬ್ಬ ಶಿಕ್ಷಕರೂ ಸಹ ಇರಲಿಲ್ಲ. ತಮಗೆ ಗೊತ್ತಿರುವ ಹಾಗೆ ಸರ್ಕಾರದವರು ಸುತೋಲೆಯನ್ನು ಕಳಿಸಿರುವುದು ನಿಜ. ನಾವು ಯಾವುದೇ ರೀತಿಯ ಹಣಕಾಸಿನ ಸಹಕಾರವನ್ನು ಕೊಡುವುದಿಲ್ಲ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಆದರೂ ಸಹ ಅವರು ಶಿಕ್ಷಕರು ಇಲ್ಲದಿರುವುದರಿಂದ ಶಾಲೆಯನ್ನು ನಡೆಸಬೇಕು ಎನ್ನತಕ್ಕ ದೃಷ್ಟಿಯಿಂದ ಅವರಲ್ಲಿ ಇರತಕ್ಕ ಫಂಡ್‌ನಲ್ಲಿ ಅಪ್ರೋಪ್ರಿಯೇಷನ್ ಮಾಡಿಕೊಂಡು

300-400 ರೂಪಾಯಿಗಳನ್ನು ಕೊಟ್ಟು ನೇಮಕ ಮಾಡಿಕೊಂಡರು. ಅವರುಗಳು 4-5 ವರ್ಷಗಳ ಕಾಲ ಕೆಲಸ ಮಾಡಿದ್ದಾರೆ.

ಈಗ ನಾನು ಒತ್ತಾಯ ಮಾಡುವುದೇನೆಂದರೆ ಸರ್ಕಾರದವರು 15-20 ಸಾವಿರ ಜನ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತೇವೆ ಎನ್ನತಕ್ಕ ಹೇಳಿಕೆಯನ್ನು ಕೊಟ್ಟಿದ್ದಾರೆ. ಕೆಲವನ್ನು ನೇಮಕ ಮಾಡಿಕೊಳ್ಳುವವರಿದ್ದೀರಿ. ಈ ಸಂದರ್ಭದಲ್ಲಿ ಅವರಿಗೂ ಕೂಡ ಆಧ್ಯತೆಯನ್ನು ಕೊಡಬೇಕು. ಅದನ್ನು ಕೊಡಲು ಸಾಧ್ಯವೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಅಧ್ಯಕ್ಷರೆ, ವೆಯ್‌ಟೇಜನ್ನು ಕೊಡುತ್ತಿದ್ದೇವೆ. ಆದರೆ ಆಧ್ಯತೆಯನ್ನು ಕೊಡಲು ಕಷ್ಟವಾಗುತ್ತದೆ. ಅರ್ಧ ಅಂಕದ ವೆಯ್‌ಟೇಜ್‌ನ್ನು ಕೊಡುತ್ತಿದ್ದೇನೆ. ಗರಿಷ್ಟ ವಯೋಮಿತಿಯ ಮಿತಿಯನ್ನು ಹಾಕುವುದಿಲ್ಲ. ಈ ಎರಡು ವಿಚಾರದಲ್ಲಿ ಮಾತ್ರ ವಿನಾಯತಿಯನ್ನು ಕೊಡಬಹುದು. ಆದರೆ ಆಧ್ಯತೆಯನ್ನು ಕೊಡುವುದು ಮಾತ್ರ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು : ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳವರ ಪ್ರಶ್ನೆಗಳನ್ನು ಮೊದಲು ಮುಗಿಸುತ್ತೇನೆ, ಅವರು ಆ ಮನೆಗೆ ಹೋಗಬೇಕಾಗಿದೆ.

**ಬೆಲೆ ಏರಿಕೆ ಬಗ್ಗೆ**

415 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆಹಾರ ಪದಾರ್ಥಗಳ ಬೆಲೆ ಗಗನಕ್ಕೆ ಏರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಅವುಗಳ ಬೆಲೆ ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?*

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಬಂದಿದೆ.

ಆ) ಮುಕ್ತ ಮಾರುಕಟ್ಟೆಯಲ್ಲಿ ಅಗತ್ಯ ವಸ್ತುಗಳ ಬೆಲೆಗಳನ್ನು ಹತೋಟಿಯಲ್ಲಿಡಲು ಅಗತ್ಯ ವಸ್ತುಗಳಾದ ಅಕ್ಕಿ, ಗೋಧಿ, ಮತ್ತು ಸೀಮೆಎಣ್ಣೆ ತಾಳಿಎಣ್ಣೆಯನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ವಿತರಣೆ ಮಾಡಲಾಗುತ್ತಿದೆ. ಅದೂ ಅಲ್ಲದೇ ಕಾಳಸಂತೆ ಮತ್ತು ಅಕ್ರಮ ದಾಸ್ತಾನು ಮಾಡುವವರ ವರ್ತಕರ ಮೇಲೆ ಧಾಳಿ ನಡೆಸಿ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಈ ಬೆಲೆ ಏರಿಕೆಯನ್ನು ತಡೆಗಟ್ಟುವ ಬಗ್ಗೆ ಸರ್ಕಾರ ಏನು ಕ್ರಮಕೈಗೊಂಡಿದೆಯೆಂದು ಕೇಳಿದರೆ ಈ ಉತ್ತರ ಕೊಟ್ಟಿದ್ದಾರೆ. ಈ ಉತ್ತರದಿಂದ ಬೆಲೆ ಏರಿಕೆಯನ್ನು ತಡೆಗಟ್ಟುವುದಕ್ಕೆ ನಿಮ್ಮ ಕೈಯಲ್ಲಿ ಸಾಧ್ಯವಿಲ್ಲ. ಪ್ರಾಮಾಣಿಕವಾಗಿ ಹೇಳಿ ನೀವು ಏನು ಕೆಲಸಮಾಡುತ್ತಿದ್ದೀರಿ. ಈ ರಾಜ್ಯದ ಜನತೆ ಇವತ್ತಿನ ಬೆಲೆ ಏರಿಕೆಯಲ್ಲಿ ತತ್ತರಿಸಿದ್ದಾರೆ, ತೊಂದರೆಗೆ ಸಿಕ್ಕಿದ್ದಾರೆ. ಇವತ್ತು ಅಸಾಧ್ಯವಾದಂತಹ ಬೆಲೆ ಏರಿಕೆಯಾಗಿದೆ. ಈ ಬಗ್ಗೆ ಸುಮ್ಮನೆ ತಾವು ಪಡಿತರ ಪದ್ಧತಿಯಲ್ಲಿ ಅಕ್ಕಿ ಕೊಡುತ್ತಿದ್ದೇವೆ ತಾಳಿ ಎಣ್ಣೆ ಕೊಡುತ್ತೇವೆ, ರಾಗಿ ಕೊಡುತ್ತೇವೆಂದು ದಮ್ಮಡಿ ಬಾರಿಸಿದರೆ ನಡೆಯುವುದಿಲ್ಲ. ದಯಮಾಡಿ ನಿಮ್ಮ ಪ್ರಾಮಾಣಿಕವಾದಂತಹ ಪ್ರಯತ್ನ ಏನು ಮಾಡಿದ್ದೀರಿ ಅದನ್ನು ಹೇಳಬೇಕು.